**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ.**

**ಸಿ.ಸಿ ನಂಬರ್ಃ 916/2024**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಆಡೂರ ಪೊಲೀಸ್ ಠಾಣಾ ಪೋಲೀಸರು.

ವಿರುದ್ಧ

ಆರೋಪಿತರುಃ
1. ನಿಂಗಪ್ಪ ತಂದೆ ಬಿಸಟೇಪ್ಪ ಕಾಳಂಗಿ
ವಯಸ್ಸುಃ 44 ವರ್ಷ,
2. ರಾಕೇಶ ತಂದೆ ನಿಂಗಪ್ಪ ಕಾಳಂಗಿ
ವಯಸ್ಸುಃ 22 ವರ್ಷ,
5. ಸಾಗರ @ ಶ್ರೀಕಾಂತ ಶಂಬಣ್ಣ ಕಾಳಂಗಿ
ವಯಸ್ಸುಃ 19 ವರ್ಷ,
6. ಸಂಗಪ್ಪ ತಂದೆ ರುದ್ರಪ್ಪ ದೇವಿಹೊಸೂರ
ವಯಸ್ಸುಃ 49 ವರ್ಷ,
7. ಬಸವರಾಜ ತಂದೆ ವಿರುಪಾಕ್ಷಪ್ಪ ಕೊರವರ
ವಯಸ್ಸುಃ 22 ವರ್ಷ,
ಆರೋಪಿತರ ವಾಸಃ ಶಂಕರಿಕೊಪ್ಪ
ತಾಃ ಹಾನಗಲ್ಲ, ಜಿಃ ಹಾವೇರಿ.

**ದೋಷಾರೋಪಣೆ**

ನಾನು ಶ್ರೀ. ಜನಾರ್ಧನ ಎಸ್ ಕೆ, ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ಆಡೂರ ಪೋಲಿಸ್ ಠಾಣೆಯ ವ್ಯಾಪ್ತಿಯ ಶಂಕರಿಕೊಪ್ಪ ಗ್ರಾಮದ ಚಾಸಾ-1 ರವರು 1 ನೇ ಆರೋಪಿಯಾದ ನಿಮಗೆ ತಮ್ಮ ಜಮೀನಿನ ಪೈಕಿ 12 ಗುಂಟೆ ಜಾಗವನ್ನು ಖರೀದಿ ಕೊಟ್ಟಿದ್ದು, ಸದರಿ ಜಾಗೆಗೆ ಓಡಾಡುವ ಸಂಬಂಧವಾಗಿ ಮನಸ್ತಾಪ ಇದ್ದು, ದಿಃ 02-11-2023 ರಂದು ಬೆಳಗಿನ ಜಾವ 12-30 ಗಂಟೆಯ ಸುಮಾರಿಗೆ ಪಿರ್ಯಾದಿಯ ಮನೆಯ ಬಾಗಿಲು ಬಡಿದು, ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ, ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ಅಕ್ರಮ ಕೂಟದ ಸದಸ್ಯರಾಗಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 143 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

2. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಚಾಸಾ-1 ಮತ್ತು ಚಾಸಾ-4 ರಿಂದ ಚಾಸಾ-7 ರವರ ಜೊತೆಗೆ ಗಲಾಟೆ ಮಾಡಿ ಬಲ ಪ್ರಯೋಗ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 147 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

3. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಕೈಗಳಲ್ಲಿ ಸಲಿಕೆ, ಬಡಿಗೆಗಳನ್ನು ಹಿಡಿದುಕೊಂಡು ಚಾಸಾ-1 ಮತ್ತು ಚಾಸಾ-4 ರಿಂದ ಚಾಸಾ-7 ರವರ ಜೊತೆಗೆ ತಂಟೆ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 148 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

4. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ, ಪಿರ್ಯಾದಿಯ ಮನೆಯ ಬಾಗಿಲು ಬಡಿದು, ಪಿರ್ಯಾದಿಯು ಹೊರಗೆ ಬಂದ ತಕ್ಷಣ ಪಿರ್ಯಾದಿಯೊಂದಿಗೆ ಜಗಳ ಮಾಡುತ್ತಿದ್ದಾಗ, ಜಗಳ ಬಿಡಿಸಲು ಬಂದ ಚಾಸಾ-6 ಮತ್ತು ಚಾಸಾ-7 ರವರಿಗೆ ಆರೋಪಿತರಾದ ನಿಮ್ಮಗಳ ಪೈಕಿ 1 ಮತ್ತು 6 ನೇ ಆರೋಪಿಗಳಾದ ನೀವು ಕೂಡಿಕೊಂಡು ಕೈಗಳಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿದ್ದಲ್ಲದೇ, ಅವರನ್ನು ಕೆಳಗೆ ಕೆಡವಿ ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ನೋವು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

5. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-5 ರವರಿಗೆ ಬಡಿಗೆಯಿಂದ ಮೈ ಕೈಗೆ ಹೊಡೆದಿದ್ದಲ್ಲದೇ, ಆಗ ಜಗಳ ಬಿಡಿಸಲು ಬಂದ ಚಾಸಾ-4 ರವರಿಗೆ 2 ನೇ ಆರೋಪಿಯಾದ ನೀವು ಕೈಯಲ್ಲಿದ್ದ ಸಲಿಕೆಯಿಂದ ತಲೆಗೆ ಜೋರಾಗಿ ಹೊಡೆದಿದ್ದಲ್ಲದೇ, 5 ರಿಂದ 7 ನೇ ಆರೋಪಿಗಳಾದ ನೀವು ಚಾಸಾ-1 ಮತ್ತು ಚಾಸಾ-5 ರವರಿಗೆ ಬಡಿಗೆ ಮತ್ತು ಸಲಿಕೆಯಿಂದ ಮೈ ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯವನ್ನು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ.

ಕಲಂ 324 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

6. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ, ಆಗ ಜಗಳ ಬಿಡಿಸಲು ಬಂದ ಚಾಸಾ-6 ಮತ್ತು ಚಾಸಾ-7 ರವರಿಗೆ ಆರೋಪಿತರಾದ ನಿಮ್ಮಗಳ ಪೈಕಿ 1 ಮತ್ತು 6 ನೇ ಆರೋಪಿಗಳಾದ ನೀವು ಚಾಸಾ-6 ಮತ್ತು ಚಾಸಾ-7 ರವರ ಮೈ ಮೇಲಿನ ಬಟ್ಟೆಗಳನ್ನು ಹಿಡಿದು ಎಳೆದಾಡಿ ಅವರ ವ್ಯಕ್ತಿತ್ವಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 354 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

7. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಸೇರಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದು ಚಾಸಾ-1 ಮತ್ತು ಚಾಸಾ-4 ರಿಂದ ಚಾಸಾ-7 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಶಾಂತಿ ಭಂಗವನ್ನುಂಟು ಮಾಡಲು ಉದ್ದೇಶಪೂರ್ವಕವಾಗಿ ಪ್ರೇರೇಪಿಸಿರುತ್ತೀರಿ. ಈ ರೀತ್ಯ ನೀವು ಭಾ.ದಂ.ಸಂ. ಕಲಂ 504 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

8. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿಯಾದ ನೀವು ಸೇರಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದು ಚಾಸಾ-1 ಮತ್ತು ಚಾಸಾ-4 ರಿಂದ ಚಾಸಾ-7 ರವರಿಗೆ ಜೀವದ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

ಸದರಿ ಮೇಲೆ ಹೋರಿಸಿದ ದೋಷಾರೋಪಣೆಯನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಎಂದು ಆದೇಶ ಮಾಡಿರುತ್ತೇನೆ.

ಪ್ರ: 1. ಈಗ ಮೇಲೆ ಓದಿ ಹೇಳಿದ ಆರೋಪಗಳು ನಿಮಗೆ ತಿಳಿದಿದೆಯೋ?

ಆರೋಪಿತರ ಉತ್ತರಃ

ಪ್ರ: 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿತರ ಉತ್ತರಃ

(ಆರೋಪಿತರಿಗೆ ದಿನಾಂಕಃ 24-12-2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹಾನಗಲ್ಲ
ದಿನಾಂಕಃ 24-12-2024.

ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಹಾನಗಲ್ಲ.

ಆರೋಪಿತರ ಸಹಿಗಳುಃ

1 ನೇ ಆರೋಪಿಯ ಸಹಿ

2 ನೇ ಆರೋಪಿಯ ಸಹಿ

5 ನೇ ಆರೋಪಿಯ ಸಹಿ

6 ನೇ ಆರೋಪಿಯ ಸಹಿ

7 ನೇ ಆರೋಪಿಯ ಸಹಿ